**OS No. 102/2020** **DW-3**

ದಿನಾಂಕ: **07.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲು ವಾದಿ ಪರ ಶ್ರೀ ಕೆ ಎನ್ ಆರ್ ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನೀಡಿರುವ ವಿಳಾಸದಲ್ಲಿ ಸುಮಾರು 20 ವರ್ಷಗಳಿಂದ ವಾಸವಿದ್ದೇನೆ. ನನಗೆ ಕಲ್ಲು ಗುಡ್ಡ ಗ್ರಾಮ, ತೀರ್ಥಹಳ್ಳಿ ತಾಲ್ಲೂಕಿನ ಸರ್ವೆ ನಂಬರ್ 265 ರಲ್ಲಿ 2 ಎಕರೆ ಜಮೀನು ಇರುತ್ತದೆ. ಸದರಿ ಸ್ವತ್ತು ನನಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ನನ್ನ ಸ್ವತ್ತಿನ ಚೆಕ್ಕು ಬಂದಿ ನನಗೆ ಹೇಳಲು ಬರುವುದಿಲ್ಲ. ವಾದಿಯರು ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ಸಲ್ಲಿಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ , ಸಾಕ್ಷಿಯು ಮುಂದುವರಿದು ಪ್ರತಿವಾದಿಗಳು ಜಾಗದ ವಿಚಾರಕ್ಕೆ ತಕರಾರು ಮಾಡಿರುತ್ತಾರೆ ಎಂದು ಹೇಳಿರುವುದನ್ನು ಕೇಳಿ ತಿಳಿದುಕೊಂಡಿರುತ್ತೇನೆ. ಪ್ರತಿವಾದಿಯರು ನನ್ನ ನೆಂಟರಿಸ್ಟರು. ಸರ್ವೆ ನಂಬರ್ 265 ನ್ನು ಬಿಟ್ಟರೆ ಸದರಿ ಗ್ರಾಮದಲ್ಲಿ ನನಗೆ ಬೇರೆ ಯಾವುದೇ ಜಮೀನು ಇರುವುದಿಲ್ಲ. 5 ನೇ ಪ್ರತಿವಾದಿಯವರ ಮಗ ಆದರ್ಶ್ ನನಗೆ ಗೊತ್ತಿದೆ. ನನಗೆ ಸೇರಿದ ಸರ್ವೆ ನಂಬರ್ 265 ನ್ನು ನಾನು 5 ನೇ ಪ್ರತಿವಾದಿಯ ಮಗನಾದ ಆದರ್ಶ್ ಗೆ ಮಾರಾಟ ಮಾಡಿರುತ್ತೇನೆ ಎಂದರೆ ಸರಿ. ಪ್ರಕರಣದಲ್ಲಿ ಸಾಕ್ಷ್ಯ ನುಡಿಯಲು ಸದರಿ ಆದರ್ಶ್ ನನಗೆ ಹೇಳಿರುತ್ತಾನೆ ಎಂದೆರೆ ಸರಿಯಲ್ಲ.

ದಾವಾಸ್ವತ್ತಿನ ಚೆಕ್ಕುಬಂದಿ ನನಗೆ ಗೊತ್ತಿಲ್ಲ. ಸರ್ವ ನಂಬರ್ 261 ಸರ್ಕಾರಿ ಜಮೀನಿನಲ್ಲಿ ಕಾರೆಕೊಪ್ಪಕ್ಕೆ ಹೋಗುವ ರಸ್ತೆ ಇದೆ ಎಂದರೆ ಸರಿ. ಸರ್ವೆ ನಂಬರ್ 263, 263, 265 ರ ಜಮೀನುಗಳಿಗೆ ಓಡಾಡಲು ಸರ್ವೆ ನಂಬರ್ 261 ಸರ್ಕಾರಿ ಜಮೀನಿನಲ್ಲಿರುವ ಕಾರೆಕೊಪ್ಪಕ್ಕೆ ಹೋಗುವ ರಸ್ತೆಯನ್ನೇ ಬಳಸುತ್ತಾರೆ ಎಂದರೆ ಸರಿ. ದಾವಾಸ್ವತ್ತಿನಲ್ಲಿ ಯಾವುದೇ ರಸ್ತೆ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಗ್ರಾಮ ನಕ್ಷೆಯನ್ನು ನೋಡಿರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 2 ನೇ ಪ್ಯಾರಾದಲ್ಲಿ ನಮೂದಾಗಿರುವ ವಿಚಾರಗಳನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ . ನಾನು 1 ನೇ ಪ್ರತಿವಾದಿ ಮತ್ತು 5 ನೇ ಪ್ರತಿವಾದಿಯ ಮಗನ ಮಾತನ್ನು ಕೇಳಿಕೊಂಡು ದಾವವೆಯ ಬಗ್ಗೆ ಯಾವುದೇ ವಿಚಾರ ನನಗೆ ಗೊತ್ತಿಲ್ಲದೇ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯ ವಿಚಾರಣಾ ಪ್ರಮಾಣ ಪತ್ರದ 2 ನೇ ಪುಟದಲ್ಲಿ ಹೇಳಿದರುವಂತೆ ತಹಶೀಲ್ದಾರ್, ಜಿಲ್ಲಾಧಿಕಾರಿ ಹಾಗೂ ಪೊಲೀಸ್ ಠಾಣೆಗಳಿಗೆ ಯಾವತ್ತೂ ಸಹ

ದೂರು ನೀಡಿರುವುದಿಲ್ಲ. ವಾದಿ ಮತ್ತು ಪ್ರತಿವಾದಿಯರ ನಡುವೆ ಯಾವ ವಿಚಾರಕ್ಕೆ ತಕರಾರು ನಡೆಯುತ್ತಿದ್ದೆ ಎಂಬ ಬಗ್ಗೆ ನನಗೆ ಗೊತ್ತಿಲ್ಲ.

ಮರು ವಿಚಾರಣೆ ಃ ಇಲ್ಲ.

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿಯಿದೆ.

ಪ್ರಧಾನ ವ್ಯವಹಾರ ನ್ಯಾಯಾಧೀಶರು,

ತೀರ್ಥಹಳ್ಳಿ